

‘ಮಕ್ಕಳಿರಲವ್ವ ಮನೆತುಂಬ’ ಎಂದ ಹಿರಿಯರ ಮಾತಿಗೆ ‘ಮಕ್ಕಳಿರಲೇಬೇಕೆ?’ ಎಂದು ಮರುಪ್ರಶ್ನೆ ಎಸೆಯುತ್ತಿದೆ ಹೊಸ ತಲೆಮಾರು. ಹೊಸ ಕಾಲದಲ್ಲಿ ಕುಟುಂಬ, ಮದುವೆ, ಸಂಬಂಧಗಳೆಲ್ಲವೂ ಮರುವ್ಯಾಖ್ಯಾನಕ್ಕೆ ಒಳಗಾಗುತ್ತಿವೆ. ಮಕ್ಕಳ ಹೆರದೆಯೂ ಮಹಿಳೆ ಪರಿಪೂರ್ಣ ಜೀವನ ನಡೆಸಬಹುದು ಎಂಬ ಮಾತು ಗಟ್ಟಿಯಾಗಿ ಕೇಳಿಬರುತ್ತಿರುವ ಹೊತ್ತಿನಲ್ಲಿಯೇ, ಮಹಿಳೆಯರಲ್ಲಿ ಫಲವಂತಿಕೆಯ ಪ್ರಮಾಣ ಕುಸಿಯುತ್ತಿರುವ ಕುರಿತು ಹಲವು ವರದಿಗಳು ಬೊಟ್ಟು ಮಾಡುತ್ತಿವೆ. ‘ಮಕ್ಕಳನ್ನು ಹೆರಬೇಡಿ; ಅವರಿಗೆ ಸ್ವಸ್ಥ ಬದುಕು ಕಲ್ಪಿಸುವ ಸಮಾಜ ಇಲ್ಲಿಲ್ಲ’ ಎಂಬ ಮಾತು ಚಳವಳಿಯೇ ಆಗಿ ರೂಪುಗೊಳ್ಳುತ್ತಿರುವ ಹೊತ್ತಿನಲ್ಲಿಯೇ ಹಾದಿಗೊಂದು ಹೆಜ್ಜೆಗೊಂದು ಫರ್ಟಿಲಿಟಿ ಸೆಂಟರ್‌ಗಳು ತಲೆಯೆತ್ತಿವೆ. ಒಟ್ಟಾರೆ ‘ತಾಯಿ’ ಎಂಬ ಪರಿಕಲ್ಪನೆ ಬರಿ ಹೆರುವ ಪ್ರಕ್ರಿಯೆಯ ಆಚೆಗೂ ವಿಸ್ತಾರಗೊಳ್ಳುತ್ತಿರುವ ಈ ಹೊತ್ತಿನಲ್ಲಿ, ‘ಬಂಜೆತನ’ ಮತ್ತು ‘ಮಗುರಹಿತ ಜೀವನ’ದ ಕುರಿತು ಹಲವು ನಿಟ್ಟಿನಿಂದ ಈ ಲೇಖನ ವಿಶ್ಲೇಷಿಸುತ್ತದೆ.

■ ಚೈತ್ರಿಕಾ ನಾಯ್ಕ ಹರ್ಗಿ